International Journal of Kannada Research
www.kannadajournal.com

ISSN: 2454–5813
IJKR 2019; 5(3): 93-95
© 2019 IJKR
www.kannadajournal.com
Received: 13-05-2019
Accepted: 16-06-2019

**ಮಂಜಪ್ಪ**
ಸಂಶೋಧನ ವಿದ್ಯಾರ್ಥಿ
ದ್ರಾವಿಡ ಸಂಸ್ಕೃತಿ ಅಧ್ಯಯನ
ವಿಭಾಗ ಕನ್ನಡ ವಿಶ್ವವಿದ್ಯಾಲಯ
ಹಂಪಿ

**Correspondence**
**ಮಂಜಪ್ಪ**
ಸಂಶೋಧನ ವಿದ್ಯಾರ್ಥಿ
ದ್ರಾವಿಡ ಸಂಸ್ಕೃತಿ ಅಧ್ಯಯನ
ವಿಭಾಗ ಕನ್ನಡ ವಿಶ್ವವಿದ್ಯಾಲಯ
ಹಂಪಿ

# ‘ನಾಯಕ’ ಹೆಸರಿಗೆ ಬೇಡರೆ ಸೂಕ್ತ

**ಮಂಜಪ್ಪ**

‘ನಾಯಕ’ಎಂಬುದಕ್ಕೆ ಅತ್ಯಂತ ಮಹತ್ವವನ್ನು ನೀಡಲಾಗಿದೆ. ನಾಯಕ ಎಂಬುದನ್ನು “ಮುಖ್ಯಸ್ಥ, ಮುಂದಾಳು, ಮುಖಂಡ, ಒಡೆಯ, ಸ್ವಾಮಿ, ಸೇನಾನಿ, ಪಾಳೆಯಗಾರ, ಕಥೆಯ ಮುಖ್ಯಸ್ಥ, ಶ್ರೇಷ್ಠನಾಯಕ”[೧] ಎಂಬುದಾಗಿ ಅರ್ಥೈಸಲಾಗಿದೆ. ಮನುಷ್ಯ ತನ್ನ ಆರಂಭ ಕಾಲದಿಂದಲೂ ಅಲೆಮಾರಿಯಾಗಿ, ಬುಡಕಟ್ಟು ಸಮುದಾಯಗಳಿಂದಲೂ ಗುಂಪು-ಗುಂಪಾಗಿ ಜೀವನ ನಡೆಸುವ ಪ್ರವೃತ್ತಿಯೊಂದಿಗೆ ಒಬ್ಬ ವ್ಯಕ್ತಿಯನ್ನು ಮುಖಂಡನನ್ನಾಗಿ(ನಾಯಕ) ಸ್ವೀಕರಿಸಿ ಅವನ ಮಾರ್ಗದರ್ಶನದಲ್ಲಿ ಜೀವನ ಸಾಗಿಸುವ ಜೀವನ ಕ್ರಮವನ್ನು ನಾವು ಹಿಂದಿನಿಂದಲೂ ಕಾಣುತ್ತೇವೆ. ಅಂದರೆ ನಾಯಕ ಎಂಬುದಕ್ಕೆ ಬಹು ಹಿಂದಿನಿಂದಲೂ ಕೂಡ ಮಹತ್ವವನ್ನು ನೀಡಿರುವುದನ್ನು ಗಮನಿಸಬಹುದು.
ನಾಯಕನಾಗುವವನು ಕೆಲವು ವಿಶಿಷ್ಟ ಗುಣಗಳನ್ನು ಹೊಂದಿರಬೇಕಾಗಿರುತ್ತಿತ್ತು. ನಾಯಕ ಪಟ್ಟವನ್ನು ಪಡೆಯಬೇಕಾದರೆ ಅವನಲ್ಲಿ ಕೆಲವು ಅರ್ಹತೆಗಳು ಇರಬೇಕಾಗುತ್ತದೆ. ಅಂತಹ ವ್ಯಕ್ತಿಗಳಿಗೆ ನಾಯಕ ಸ್ಥಾನವನ್ನು ನೀಡಲಾಗುತ್ತಿತ್ತು. ಅಂತಹ ಅರ್ಹತೆಗಳೆಂದರೆ

- ಶೂರತ್ವದ ಗುಣ ಹೊಂದಿರಬೇಕು
- ಜ್ಞಾನಿಯಾಗಿರಬೇಕು
- ಆತ್ಮವಿಶ್ವಾಸ
- ದೃಢನಿರ್ಧಾರ
- ಕಠಿಣ ಸಾವಲು ಎದುರಿಸುವುದು
- ಸೂಕ್ತ ಮಾರ್ಗದರ್ಶನ
- ವಿಶ್ವಾಸದ ಗುಣವಿರಬೇಕು
- ಸ್ವಾಭಿಮಾನಿಯಾಗಿರಬೇಕು
- ಸೌಹರ್ಧತೆಯ ಗುಣ ಮತ್ತು ನಿಷ್ಠೆ ಹೊಂದಿರಬೇಕು

ಇದರ ಹಿನ್ನೆಲೆಯಲ್ಲಿಯೇ ನಾಯಕ ಎಂಬ ಮಹತ್ವದ ಸ್ಥಾನವನ್ನು ಬೇಡರಲ್ಲಿ ಗುರುತಿಸಬಹುದು. ‘ನಾಯಕ’ ಎಂಬ ಹೆಸರಿಗೆ ಬೇಡರೆ ಸೂಕ್ತ ಎನ್ನುವಂತೆ ಕ್ರಿ.ಪೂ.ದಿಂದಲೂ ನಮ್ಮ ನಾಡಿನ ಬೇಡರ(ನಾಯಕ)ನಾಯಕತ್ವದ ಗುಣಗಳು ಅವರ ಸಾಧನೆಯ ಪುಟಗಳನ್ನು ಸಾರಿರುವುದನ್ನು ಇಂದಿಗೂ ಗಮನಿಸಲಾಗಿದೆ, ಅದಕ್ಕಾಗಿಯೇ ......,
“ದೈವ ಭಕ್ತಿಗೆ ಕಣ್ಣುಕೊಟ್ಟ ಸಮಾಜ, ಗುರುಭಕ್ತಿಗೆ ಬೆರಳು ಕೊಟ್ಟ ಸಮಾಜ, ವಿಶ್ವಾಸಕ್ಕಾಗಿ ಪ್ರಾಣ ಕೊಟ್ಟ ಸಮಾಜ, ದೇಶದ ರಕ್ಷಣೆಗಾಗಿ ಖಡ್ಗ ಹಿಡಿದ ಸಮಾಜ, ಸ್ವಾಭಿಮಾನಕ್ಕಾಗಿ ಸರ್ವಸ್ವವನ್ನು ಕೊಟ್ಟ ಸಮಾಜ, ರಾಷ್ಟ್ರಸಮಗ್ರತೆಗೆ ಮಹಾಗ್ರಂಥ ಕೊಟ್ಟ ಸಮಾಜ ಅದುವೇ ವಾಲ್ಮೀಕಿ ಸಮಾಜ”[೨]
ಬೇಡರ ಈ ಸಾಧನೆಗಳನ್ನು ಗಮನಿಸುತ್ತ ಹೋದಂತೆ ‘ನಾಯಕ ಎಂಬ ಹೆಸರಿಗೆ ಬೇಡರೆ ಸೂಕ್ತರು” ಎಂದೆನಿಸಿಕೊಳ್ಳುವುದು ನಿಜ ಎನಿಸುತ್ತದೆ. ಹಾಗಾಗಿಯೇ ಬೇಡರ ಶೂರತ್ವವನ್ನು ಕುರಿತಂತೆ ‘ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು. ಆದರೆ ಬೇಡರಿಗಿಂತ ಶೂರರು ದೊರೆಯಲಾರರು”ಎಂದು ವಿಲಿಯಂ ಸ್ಮಿತ್ ಹೇಳಿದ್ದಾರೆ.[೩]

- ಶೂರತ್ವದಲ್ಲೂ ನಾಯಕರು ಬೇಡರು (ಸುರಪುರ ಬೇಡರು, ಹಲಗಲಿಯ ಬೇಡರು ಇತ್ಯಾದಿ)

- ಜ್ಞಾನದಲ್ಲೂ ನಾಯಕರು(ವಾಲ್ಮೀಕಿ)
- ನಾಡಿನ ರಕ್ಷಣೆಯಲ್ಲೂ ನಾಯಕರು(ಮದಕರಿ ನಾಯಕ)
- ದೈವಭಕ್ತಿಗೂ ನಾಯಕರು(ಬೇಡರ ಕಣ್ಣಪ್ಪ)
- ವಿಶ್ವಾಸಕ್ಕೂ ನಾಯಕರು(ಕುಮಾರ ರಾಮ)
- ಸ್ವಾಭಿಮಾನಕ್ಕೂ ನಾಯಕರು(ಸಿಂಧೂರ ಲಕ್ಷ್ಮಣ)

ಬೇಡರು ಹೀಗೆ ಪ್ರತಿಯೊಂದರಲ್ಲೂ ನಾಯಕ ಎಂಬ ಹೆಸರಿಗೆ ಪ್ರತಿನಿಧಿಗಳಾಗಿರುವುದು ಗಮನಾರ್ಹ ಸಂಗತಿಯಾಗಿದೆ.

- **ಶೂರತ್ವದಲ್ಲಿ ನಾಯಕರು ಬೇಡರು**

ಬೇಡ ಎನ್ನುವ ಹೆಸರೇ ಸೂಚಿಸುವಂತೆ 'ಯಾರಿಗೂ ಹೆದರದವನು'[೪] ಎಂಬುದನ್ನು ನಿರ್ಧಾರಿಸುವಂತೆ ಮೂಲ ವೃತ್ತಿ ಬೇಟೆಯಾಗಿರುವುದರಿಂದ ಧೈರ್ಯದ ಪ್ರತೀಕವಾಗಿ ಬೇಟೆಯಾಡುತ್ತಾ ಬಂದಿರುವುದನ್ನು ಗಮನಿಸುತ್ತೇವೆ. ಮುಂದೆ ಸೈನ್ಯಗಳಲ್ಲಿ ಶತ್ರುಗಳ ವಿರುದ್ಧ ಧೈರ್ಯವಾಗಿ ಹೋರಾಡುವುದನ್ನು ನಾವು ಗಮನಿಸಬಹುದು. "ವಿಜಯನಗರ ನಂತರ ಏಳಿಗೆಯಾದ ಪಾಳೆ ಪಟ್ಟುಗಳು"[೫](ಚಿತ್ರದುರ್ಗ ಬೇಡರು, ಹಲಗಲಿಯ ಬೇಡರು, ಸುರಪುರ ಬೇಡರು ಇತ್ಯಾದಿ) ಬ್ರಿಟಿಷರ ವಿರುದ್ಧವಾಗಿ ಯಾವುದೇ ಭಯವಿಲ್ಲದೆ ಹೋರಾಡಿರುವುದು ಇತಿಹಾಸದ ಪುಟಗಳಲ್ಲಿ ಗಮನಿಸಬಹುದು. ಮುಂದುವರೆದು ಹೇಳುವುದಾದರೆ ಉದಾಹರಣೆಗೆ "ಭೀಮೇಶ ಹಂಡೆ ಬಿಚ್ಚುಗತ್ತಿ ಎನ್ನುವ ಬೇಡ ಚಿರತೆಯನ್ನು ಹಿಡಿದು ಕಟ್ಟಿ ಹಾಕಿದ್ದನು. ನರಸಯ್ಯ ಎಂಬುವನು ಮೂರು ವರ್ಷದ ಟಗರನ್ನು ಸೀದಾ ಕೂಡಿಸಿ ಅದನ್ನು ತಲವಾರದಿಂದ ಒಂದೇ ಏಟಿಗೆ ಹೋಳು ಮಾಡಿದ"[೬] ಹೀಗೆ ಬೇಡರ ಶೂರತನದ ಪ್ರದರ್ಶನಗಳನ್ನು ಇತಿಹಾಸದಲ್ಲಿ ಗಮನಿಸಬಹುದು.

- **ಜ್ಞಾನದಲ್ಲೂ ನಾಯಕರು**

ಜ್ಞಾನಲೋಕದಲ್ಲಿ ನಮ್ಮ ನಾಡಿನ ಸಾಹಿತ್ಯಲೋಕಕ್ಕೆ ಆದಿಕವಿ ಎಂದೇ ಗುರುತಿಸಿಕೊಂಡ ಮಹರ್ಷಿ ವಾಲ್ಮೀಕಿ ಜ್ಞಾನದಲ್ಲಿ ನಾಯಕ ಅಥವಾ ಮೊದಲಿಗ ಎಂದು ಗುರುತಿಸಬಹುದು. ಇದಕ್ಕೆ ಕಾರಣ 'ರಾಮಾಯಣ ಭಾರತ ದೇಶದ ಮೊದಲ ಕಾವ್ಯ'[೭] ಈ ದಿಸೆಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಏಕೈಕ ಆದಿಕವಿ ಎಂಬುದರ ಜೊತೆಗೆ ಜ್ಞಾನಲೋಕದ ಸಾಹಿತ್ಯ ರಚನೆಗೆ 'ನಾಯಕ'ಎಂದು ಗುರುತಿಸಬಹುದು.

- **ನಾಡಿನ ರಕ್ಷಣೆಯಲ್ಲೂ ನಾಯಕರು**

ಒಂದು ನಾಡು ಅಥವಾ ದೇಶ ರಕ್ಷಣೆಯ ಮಾತು ಬಂದಾಗ ತಾಯ್ನಾಡಿನ ಸೇವೆಗೆ ಧೈರ್ಯವಾಗಿ ಮುನ್ನುಗ್ಗಿ ಹೋರಾಡಿದ ಬೇಡರು ನಿಜಕ್ಕೂ ನಾಯಕ ಸ್ಥಾನಕ್ಕೆ ಸೂಕ್ತರು. ಇದಕ್ಕೆ ನಿದರ್ಶನಗಳಾಗಿ ಮದಕರಿನಾಯಕ, ವೆಂಕಟಪ್ಪನಾಯಕ, ಹಲಗಲಿ ಬೇಡರು, ಕುಮಾರರಾಮನಂತಹ ವೀರರು ನಾಯಕರಾಗಿ ಹೋರಾಡಿರುವುದು ನಾಯಕ ಎಂಬ ಹೆಸರಿಗೆ ಗೌರವ ನೀಡಿದಂತೆ. ನಾಡಿನ ರಕ್ಷಣೆ ಮತ್ತು ಊರಿನ ಕಾವಲುಗಾರರಾಗಿ(ತಳವಾರ) ಗ್ರಾಮ ರಕ್ಷಕ, ದೇಶ–ರಾಷ್ಟ್ರ ರಕ್ಷಕನಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡವರು. ಕತ್ತಿ ಹಿಡಿದು ಊರಿನ ಹಿತವನ್ನು ಕಾಪಾಡುವೆನೆಂದೂ ಮತ್ತೆ ಯುದ್ಧಕ್ಕಾಗಿ ಹೋರಾಡುವ ಸೈನಿಕರಾಗಿದ್ದು,[೮] ನಾಡ ರಕ್ಷಣೆಗಾಗಿ ನಾಯಕರಾಗಿ ಗುರುತಿಸಿಕೊಂಡಿದ್ದಾರೆ.

- **ದೈವಭಕ್ತಿಗೂ ನಾಯಕರು**

ಬೇಡರು ಕೇವಲ ಬೇಟೆಯನ್ನೇ ವೃತ್ತಿಯಾಗಿ ಮಾಡಿಕೊಂಡು ತಿನ್ನುವುದಕ್ಕಾಗಲಿ ಶೂರತ್ವದಿಂದ ಹೋರಾಡುವುದಕ್ಕಾಗಲಿ ಅಷ್ಟೇ ಸೀಮಿತವಾಗಿರಲಿಲ್ಲ. ದೈವ ಭಕ್ತಿಗೂ ಬೇಡರು ನಾಯಕರು ಎಂಬುದನ್ನು ನಿರೂಪಿಸಿದ್ದಾರೆ. ಭಕ್ತಿಯಲ್ಲೂ ಮುಂದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ, "ಶ್ರೀರಾಮನ ಭಕ್ತನಾಗಿ ಬೇಡರ ಪಡೆಯ ನಾಯಕ 'ಗುಹ'ನನ್ನು ಕಾಣಬಹುದು. ಮುಗ್ಧ ಭಕ್ತೆಯಾಗಿ ಶಬರಿ ಕಂಡುಬರುತ್ತಾಳೆ".[೯] ಹಾಗೆಯೇ ಬೇಡರ ಕಣ್ಣಪ್ಪನನ್ನು ಕಾಣಬಹುದು. ಇವನು ತಾನು ಬೇಟೆಯಾಡಿದ ಆಹಾರದಲ್ಲಿ ಒಂದು ಪಾಲನ್ನು ಶಿವನಿಗೆ ಎಡೆ ಹಾಕಿ ತನ್ನ ಮಾತಿನಂತೆ ನಡೆದು ನಂತರ 'ಶಿವನಿಗೆ ತನ್ನೆರಡು ಕಣ್ಣುಗಳನ್ನು ದಾನವಾಗಿ ಕೊಟ್ಟು'[೧೦] ಮಹಾನ್ ಭಕ್ತನಾಗಿ ಗುರುತಿಸಿ ಕೊಂಡಿದ್ದಾನೆ. ಇದರಿಂದ ಭಕ್ತಿಯಲ್ಲಿ ನಿಸ್ವಾರ್ಥ ಸೇವೆ ನೀಡಿದವರಾಗಿ ಬೇಡರು ಗುರುತಿಸಿಕೊಂಡಿದ್ದಾರೆ.

- **ಗುರುಭಕ್ತಿಗೂ ನಾಯಕರು**

ವಿದ್ಯೆ ಯಾರಿಗೂ ಸೀಮಿತವಲ್ಲ ಕಲಿಯುವ ಛಲವಿದ್ದರೆ ಏನನ್ನಾದರೂ ಕಲಿಯಬಹುದು ಎಂಬುದಕ್ಕೆ ಏಕಲವ್ಯ ನಿದರ್ಶನವಾಗಿದ್ದಾನೆ. ಬೇಡ ಕುಲದವನೆಂದು ನಿರಾಕರಿಸಿ ವಿದ್ಯೆಯನ್ನು ಕಲಿಸದೆ ತಿರಸ್ಕರಿಸಿದ ದ್ರೋಣಚಾರ್ಯರ ಪ್ರತಿಮೆಯನ್ನೆ ಗುರುವೆಂದು ಬಾವಿಸಿ ಬಿಲ್ವಿದ್ಯೆಯಲ್ಲಿ ಕ್ಷತ್ರಿಯರಿಗಿಂತಲೂ ಪಾರಂಗತನಾದ ಕಾರಣ ಅರ್ಜುನನ ಸರಿಸಮಾನ ವಿದ್ಯೆಯನ್ನು ಕಲಿತ ಪರಿಣಾಮವಾಗಿ ದ್ರೋಣಚಾರ್ಯರು ಏಕಲವ್ಯನಲ್ಲಿ ಗುರು ಭಿಕ್ಷೆಯಾಗಿ ಕೈಬೆರಳನ್ನು ಕೇಳಿದಾಗ ಕಾಣಿಕೆಯಾಗಿ ನೀಡಿ ಗುರು ಭಕ್ತಿ ಮೆರೆದ ಏಕಲವ್ಯ ನಿಜವಾದ ನಾಯಕನೆನೆಸುತ್ತಾನೆ.

- **ವಿಶ್ವಾಸಕ್ಕೂ ನಾಯಕರು**

ಬೇಡರು ವಿಶ್ವಾಸಕ್ಕೂ ನಾಯಕರು ಎಂಬುದನ್ನು ನಾವು ಬೇಡ ನಾಯಕರಲ್ಲಿ ಗಮನಿಸಬಹುದು. ಸಂಗೊಳ್ಳಿರಾಯಣ್ಣನು ಬ್ರಿಟಿಷರ ವಿರುದ್ಧವಾಗಿ ಹೋರಾಡಲು ಸುರಪುರ ಅರಸನ ಸಹಾಯ ಕೇಳಿ ಅವನಿಂದ '೩೦೦ ಬೇಡ'[೧೧] ನಾಯಕರ ದಂಡನ್ನು ಪಡೆಯುತ್ತಾನೆ. ಕಾರಣ ಸಂಗೊಳ್ಳಿರಾಯಣ್ಣನಿಗೆ ಬೇಡರ ಮೇಲಿನ ವಿಶ್ವಾಸ ಈ ವಿಶ್ವಾಸಕ್ಕಾಗಿ ರಾಯಣ್ಣನಿಗೆ ಬೇಡರು ಕೂಡ ಅಷ್ಟೇ ಪ್ರಾಮಾಣಿಕವಾಗಿ ಬೆಂಬಲ ನೀಡುತ್ತಾರೆ. ಹಾಗೆಯೇ ಕುಮಾರರಾಮನ ತಂದೆ ಕಂಪಿಲರಾಯನು ಮಗನ ಸಹಾಸಗಳನ್ನು ಮೆಚ್ಚಿ ಆನೆಗೊಂದಿಯ ಎಲ್ಲ ಆಡಳಿತವನ್ನು ಕುಮಾರ ರಾಮನಿಗೆ ವಹಿಸಿಕೊಡುತ್ತಾನೆ. ತನ್ನ ತಂದೆಯು ತನ್ನ ಮೇಲೆ ಇಟ್ಟ ವಿಶ್ವಾಸವನ್ನು ಉಳಿಸಿಕೊಳ್ಳುವ ಸಲುವಾಗಿ ಕೊನೆಯವರೆಗೂ ವಿಶ್ವಾಸಕ್ಕಾಗಿಯೇ ಹೋರಾಡಿ ಮರಣ ಹೊಂದುತ್ತಾನೆ. ಇವು ನಾಯಕರ ವಿಶ್ವಾಸ ಗುಣಗಳಿಗೆ ನಿದರ್ಶನಗಳಾಗಿವೆ.

- **ಸ್ವಾಭಿಮಾನಕ್ಕೂ ನಾಯಕರು**

ಬೇಡರು ಯಾರ ಅಂಗಿಗೂ ಒಳಗಾಗದೆ ಸ್ವಾಭಿಮಾನಕ್ಕಾಗಿ ಬಾಳಿರುವುದನ್ನು ನಾಡಿನ ಚರಿತ್ರೆಯಲ್ಲಿ ಕಾಣಬಹುದು. ಅಂತವರಲ್ಲಿ ಸಿಂಧೂರ ಲಕ್ಷ್ಮಣನನ್ನು ಹೆಸರಿಸಬಹುದು. 'ಕಡು ಬಡತನದಲ್ಲಿ ಬೆಳೆದರು ಬಡವರ ಕಷ್ಟಕ್ಕಾಗಿ ಬ್ರಿಟಿಷರ ವಿರುದ್ಧವಾಗಿ ಸಿಡಿದೆದ್ದು ಶ್ರೀಮಂತರ ಮನೆಗಳನ್ನು ಲೂಟಿ ಮಾಡಿ ಅದನ್ನು ನಿಸ್ವಾರ್ಥತೆಯಿಂದ ಬಡವರಿಗೆ ಹಂಚಿ"[೧೨] ಸ್ವಾಭಿಮಾನಿಯಾಗಿ ಬಾಳಿದವನು ಸಿಂಧೂರ ಲಕ್ಷ್ಮಣ.

ಹೀಗೆ ನಾಡಿನ ಬೇಡರು ತಮ್ಮ ನಾಯಕ ಎಂಬ ಹೆಸರಿಗೆ ಒಂದು

ಘನತೆಯನ್ನು ನೀಡಿದ್ದಾರೆ. ನಾಯಕ ಎಂಬ ಅರ್ಥಕ್ಕೆ ಗೌರವ ನೀಡಿ ಆ ಹೆಸರಿಗೆ ತಕ್ಕಂತೆ ನಾಯಕತ್ವದ ಗುಣದಲ್ಲಿಯೇ ಬಾಳಿದ್ದಾರೆ. ಆದರೆ ಪ್ರಸ್ತುತ ದಿನಗಳಲ್ಲಿ ನಾಯಕ ಎಂಬುದಕ್ಕೆ ಮೌಲ್ಯವಿಲ್ಲದಂತ್ತಾಗಿದೆ ನಾಯಕ ಎಂಬ ಹೆಸರಿನ ಮಹತ್ವವನ್ನು ಅತ್ಯಂತ ಸಹಜ ಸ್ಥಿತಿಯಲ್ಲಿ ಬಳಕೆಗೊಳ್ಳುತ್ತಿದೆ. ಹಿಂದೆ ನಮ್ಮ ನಾಡ ಹಿರಿಯರ ಕೊಟ್ಟ ಪ್ರಾಮುಖ್ಯತೆ ಮತ್ತು ನಾಯಕರಿಗಿದ್ದ ಪ್ರಾಧನ್ಯತೇ ಇಂದು ಇಲ್ಲದಾಂತ್ತಾಗಿದ್ದು, ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ತಮ್ಮದೇ ಅದ ಕೊಡುಗೆಯನ್ನು ನೀಡಿದಂತಹ ನಾಯಕ ಸಮುದಾಯವನ್ನು ಇಂದು ಅವಮಾನಿಸಿದಂತ್ತಾಗಿದೆ. ಪಾರಂಪರಿಕವಾಗಿ ಈ ಹೆಸರಿಗೆ ಮಹತ್ವನ್ನು ನೀಡಿ ಗೌರವಿಸಿಕೊಂಡು ನಾಯಕ ಎಂಬ ಹೆಸರಿನಂತೆ ನಡೆದು ಬಂದ ಬೇಡರೆ ನಾಯಕ ಎಂಬ ಹೆಸರಿಗೆ ಸೂಕ್ತ ಎಂದೆನಿಸುತ್ತದೆ.

**ಅಡಿಟಿಪ್ಪಣಿಗಳು**

1. ಪಂಡಿತ ಕವಲಿ, ಸಚಿತ್ರ ಕನ್ನಡ, ಕನ್ನಡ ಕಸ್ತೂರಿ ಕೋಶ, ಪು.೪೯೬
2. ತಾರಿಹಳ್ಳಿ ಹನುಮಂತಪ್ಪ(ಸಂ), ನಾಯಕರ ಮಹಾಸಂಸ್ಥಾನ ಸುರಪುರ, ಪು.೨೭೪
3. ಅನಸೂಯ ಕೆಂಪನಹಳ್ಳಿ, ಮಹರ್ಷಿ ವಾಲ್ಮೀಕಿ ದಿವ್ಯದರ್ಶನ, ಸಂಪುಟ ೧, ಪು.೬೬
4. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ವಾಲ್ಮೀಕಿ ಸಿರಿ, ಪು.೧
5. ಅದೇ, ಪು.೩
6. ತಾರಿಹಳ್ಳಿ ಹನುಮಂತಪ್ಪ(ಸಂ), ನಾಯಕರ ಮಹಾಸಂಸ್ಥಾನ ಸುರಪುರ, ಪು.೭
7. ಅದೇ, ಪು.೧೩
8. ಅನಸೂಯ ಕೆಂಪನಹಳ್ಳಿ, ಮಹರ್ಷಿ ವಾಲ್ಮೀಕಿ ದಿವ್ಯದರ್ಶನ, ಸಂಪುಟ ೧, ಪು.೬೧
9. ಅದೇ, ಪು.೬೨
10. ವಿರೂಪಾಕ್ಷಿ ಪೂಜಾರಹಳ್ಳಿ(ಸಂ), ವಾಲ್ಮೀಕಿ ಸಿರಿ, ಪು.೧
11. ತಾರಿಹಳ್ಳಿ ಹನುಮಂತಪ್ಪ(ಸಂ), ನಾಯಕರ ಮಹಾಸಂಸ್ಥಾನ ಸುರಪುರ, ಪು.೪
12. ವಿರೂಪಾಕ್ಷಿ ಪೂಜಾರಹಳ್ಳಿ, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪು.೧೧೯